# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ವಿಜ್ಞಾನ ಭವನ ಸಭಾಂಗಣದಲ್ಲಿ ದಿನಾಂಕ: 07-10-2020 ರಂದು ಅಪರಾಹ್ನ 12.00 ಗಂಟೆಗೆ ನಡೆದ ಶಿಕ್ಷಣ ಮಂಡಳಿಯ ವಿಶೇಷ ಸಭೆಯ ನಡವಳಿಗಳು.

## <u>ಸಭೆಗೆ ಹಾಜರಾಗಿದ್ದ ಸದಸ್ಯರುಗಳು</u>

1. ಪ್ರೊ.ಜಿ.ಹೇಮಂತ್‌ಕುಮಾರ್, ... ಕುಲಪತಿಗಳು ಹಾಗೂ ಅಧ್ಯಕ್ಷರು
2. ಶ್ರೀ ಆರ್. ಧರ್ಮಸೇನ ... ಸದಸ್ಯರು
3. ಶ್ರೀ ಶಾಂತಕುಮಾರ್. ಕೆ ... ಸದಸ್ಯರು
4. ಡಾ. ನಾಗರಾಜು ... ಸದಸ್ಯರು
5. ಶ್ರೀ ದಿನೇಶ್ ಎಂ ಗೊನ್‌ಕರ್ ... ಸದಸ್ಯರು
6. ಡಾ. ಬಿ. ರಾಜಣ್ಣ ... ಸದಸ್ಯರು
7. ಪ್ರೊ. ಎನ್. ಎಂ. ತಳವಾರ್ ... ಸದಸ್ಯರು
8. ಪ್ರೊ. ಡಿ. ಆನಂದ ... ಸದಸ್ಯರು
9. ಪ್ರೊ. ಶಿವಬಸವಯ್ಯ ... ಸದಸ್ಯರು
10. ಪ್ರೊ. ಎಸ್. ಆರ್. ನಿರಂಜನ ... ಸದಸ್ಯರು
11. ಪ್ರೊ. ಆರ್. ರಾಜಣ್ಣ ... ಸದಸ್ಯರು
12. ಪ್ರೊ. ಸೋನರ್ ನಂದಪ್ಪ. ಡಿ ... ಸದಸ್ಯರು
13. ಪ್ರೊ. ಎಂ. ಜಿ. ಮಂಜುನಾಥ್ ... ಸದಸ್ಯರು
14. ಪ್ರೊ. ರಮೇಶ್ ... ಸದಸ್ಯರು
15. ಡಾ. ಪಿ.ಸರಸ್ವತಿ, ಗ್ರಂಥಪಾಲಕರು (ಪ್ರಭಾರ), ಮಾನಸಗಂಗೋತ್ರಿ, ಮೈಸೂರು. ... ಸದಸ್ಯರು
16. ಡಾ. ಎಸ್.ಟಿ. ರಾಮಚಂದ್ರ ನಿರ್ದೇಶಕರು, (ಪ್ರಭಾರ) ವಿದ್ಯಾರ್ಥಿ ಕ್ಷೇಮಪಾಲನ ... ಸದಸ್ಯರು
17. ಪ್ರೊ.ಎನ್.ಕೆ.ಲೋಕನಾಥ್, ನಿರ್ದೇಶಕರು, ಯೋಜನೆ ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿ ... ಸದಸ್ಯರು
18. ಡಾ.ಎಸ್.ಶ್ರೀಕಂಠಸ್ವಾಮಿ ನಿರ್ದೇಶಕರು, ಕಾಲೇಜುಅಭಿವೃದ್ಧಿ ಮಂಡಳಿ ... ಸದಸ್ಯರು
19. ಡಾ.ಪಿ.ಕೃಷ್ಣಯ್ಯ, ನಿರ್ದೇಶಕರು, (ಪ್ರಭಾರ) ದೈಹಿಕ ಶಿಕ್ಷಣ ವಿಭಾಗ ... ಸದಸ್ಯರು
20. ಪ್ರೊ. ಟಿ. ಎಸ್. ದೇವರಾಜ, ಹಣಕಾಸು ಅಧಿಕಾರಿಗಳು .. ಸದಸ್ಯರು
21. ಪ್ರೊ.ಕೆ.ಎಂ.ಮಹದೇವನ್, ಕುಲಸಚಿವ(ಪರೀಕ್ಷಾಂಗ) ... ಸದಸ್ಯರು
22. ಪ್ರೊ. ಶಿವಪ್ಪ ಆರ್, ಕುಲಸಚಿವ ... ಸದಸ್ಯ ಕಾರ್ಯದರ್ಶಿ

**<u>ವಿಶೇಷ ಆಹ್ವಾನಿತರು</u>**

23. ಪ್ರೊ. ಜಿ. ವೆಂಕಟೇಶ್‌ಕುಮಾರ್

| | | | |
|---|---|---|---|
| | 8 | Master of Business Administration (Dual Specialization) | |
| | 9 | Master of Business Administration (Finance) | |
| | 10 | Master of Business Administration (Human Resource Management) | |
| | 11 | Master of Business Administration (Marketing Management) | |
| | 12 | Master of Business Administration (Operation Management) | |
| | 13 | Master of Business Administration (Supply Chain Management) | |

**ಇತರೆ ವಿಷಯಗಳು:**

1) ಪ್ರೊ.ಎಸ್.ಆರ್.ನಿರಂಜನ್ ಅವರು ಮಾತನಾಡಿ, ಯುಜಿಸಿ ಅನುಮತಿಸದ ಇತರೆ ಕೋರ್ಸ್‌ಗಳು ಪ್ರಾರಂಭ ಮಾಡಲು ಬೇಡಿಕೆ ಬಂದರೆ ಆ ಕೋರ್ಸ್‌ಗಳನ್ನು ಪ್ರಾರಂಭಿಸಬಹುದೇ ಎಂಬ ಪ್ರಶ್ನೆಗೆ, ಕುಲಪತಿಯವರು ಉತ್ತರಿಸುತ್ತಾ ಬೇಡಿಕೆ ಬಂದಲ್ಲಿ ಆ ಕೋರ್ಸ್‌ಗಳನ್ನು ಯುಜಿಸಿಗೆ ಕಳುಹಿಸಿ ಅನುಮತಿ ಪಡೆದ ನಂತರ ಮುಂದಿನ ವರ್ಷದಿಂದ ಪ್ರಾರಂಭಿಸುವುದಾಗಿ ತಿಳಿಸಿದರು.

2) ಪ್ರೊ. ಎಸ್. ಆರ್. ನಿರಂಜನ ಅವರು ಮಾತನಾಡಿ ನಮ್ಮ ವಿಭಾಗದಲ್ಲಿ ನಡೆಯುತ್ತಿರುವ ಎಂ.ಎಸ್ಸಿ ಬಯೋಟೆಕ್ನಾಲಜಿ ಕೋರ್ಸ್ ಅನ್ನು ಭಾರತ ಸರ್ಕಾರದ ಡಿಬಿಟಿಯು ಹೆಚ್‌ಆರ್‌ಡಿ ಯೋಜನೆಯಡಿಯಲ್ಲಿ ಗುರುತಿಸಿ, ಪ್ರತಿ ವರ್ಷ All India Level, JNU ಅಡಿಯಲ್ಲಿ CEEB (Combined Entrance Examination for Biotechnology) Entrance Test ನಡೆಸಿ CEEB ತೇರ್ಗಡೆಯಾದ10 ವಿದ್ಯಾರ್ಥಿಗಳನ್ನು ನಮ್ಮ ವಿಭಾಗದ ಎಂ.ಎಸ್ಸಿ ಬಯೋಟೆಕ್ನಾಲಜಿ ಕೋರ್ಸ್‌ಗೆ ಸೇರಿಸಿ, ಅವರುಗಳಿಗೆ ಮಾಹೆಯಾನ ರೂ. ೫೦೦೦/- ದಂತೆ ಶಿಷ್ಯವೇತನ ನೀಡುತ್ತಿತ್ತು. ಈ ಕಾರ್ಯಕ್ರಮ ೧೯೯೮ ರಿಂದ ಇಲ್ಲಿಯ ತನಕ ನಡೆಯುತ್ತಿತ್ತು.

ಆದರೆ ಪ್ರಸಕ್ತ ೨೦೨೦-೨೧ ರಿಂದ ಡಿಬಿಟಿಯ ಈ ಯೋಜನೆಯಲ್ಲಿ ಸ್ವಲ್ಪ ಮಾರ್ಪಾಟು ಮಾಡಲಾಗಿದ್ದು. All India Levelನ CEEBಅನ್ನು GAT-B (Graduate Aptitude Test-Biotechnology) ಎಂಬ ಹೆಸರಿನಲ್ಲಿ ಫರಿದಾಬಾದ್‌ನ RCB (Regional Centre for Biotechnology) ಸಂಸ್ಥೆಯು ನಡೆಸುತ್ತಿದೆ. GAT-B ತೇರ್ಗಡೆಯಾದ ಅಭ್ಯರ್ಥಿಗಳು ನೇರವಾಗಿ ಆಯಾ ವಿಶ್ವವಿದ್ಯಾನಿಲಯಗಳಿಗೆ ಎಂ.ಎಸ್ಸಿ ಅರ್ಜಿಗಳನ್ನು ಸಲ್ಲಿಸಬೇಕಾಗಿರುತ್ತದೆ. ಅಂದರೆ ಡಿಬಿಟಿಯು ಪ್ರತಿ ವರ್ಷ 10 ವಿದ್ಯಾರ್ಥಿಗಳ ಪಟ್ಟಿ ಕಳುಹಿಸುವ ಬದಲಾಗಿ GAT-B ತೇರ್ಗಡೆಯಾದ 15 ವಿದ್ಯಾರ್ಥಿಗಳನ್ನು ಭಾರತ ಸರ್ಕಾರದ ಮೀಸಲಾತಿ ನಿಯಮಾನುಸಾರ ಪ್ರವೇಶಾತಿ ಮಾಡಿಕೊಳ್ಳಲು ತಿಸಿರುತ್ತಾರೆ. ಅದರಂತೆ GAT-B ತೇರ್ಗಡೆಯಾದ ಅಭ್ಯರ್ಥಿಗಳಿಗೆ ಅನುಕೂಲವಾಗುವಂತೆ, ನಾವು ನಮ್ಮ ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಎಂ.ಎಸ್ಸಿ. ಬಯೋಟೆಕ್ನಾಲಜಿ ಅರ್ಜಿಯನ್ನು ದೊರೆಯುವಂತೆ ಮಾಡಿ, GAT-B ತೇರ್ಗಡೆಯಾದ ಅಭ್ಯರ್ಥಿಗಳು ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು, ಭರ್ತಿಮಾಡಿ ನವೆಂಬರ್ 16, ೨೦೨೦ರ ಒಳಗಾಗಿ ಸದರಿ ವಿಭಾಗಕ್ಕೆ ಸಲ್ಲಿಸಲು ತಿಳಿಸಲಾಗಿದೆ. ಅರ್ಜಿಯನ್ನು ಸಲ್ಲಿಸುವಾಗ ಅರ್ಜಿ ಶುಲ್ಕ ರೂ. 1100/- (ರೂ. ೫೫೦/- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ), ಡಿ.ಡಿ. ರೂಪದಲ್ಲಿ "ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು" ಇವರ ಹೆಸರಿನಲ್ಲಿ ಸಲ್ಲಿಸಬೇಕಾಗಿ ತಿಳಿಸಿದರು.

3) ಪ್ರೊ. ಜಿ. ವೆಂಕಟೇಶ್‌ಕುಮಾರ್ ಅವರು ಮಾತನಾಡಿ, ಡಾ.ಎಸ್.ಶ್ರೀಕಂಠಸ್ವಾಮಿ, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ ಇವರು ಸಂಯೋಜನೆಯನ್ನು ಯಶಸ್ವಿಯಾಗಿ ನಡೆಸಿದಕ್ಕೆ ಅಭಿನಂದನೆಗಳನ್ನು ಸಲ್ಲಿಸಿದ್ದರು ಹಾಗೂ ಇತ್ತೀಚಿಗೆ ನಡೆದ ಎಲ್ಲಾ ಪರೀಕ್ಷೆಗಳನ್ನು ಯಾವುದೇ ತೊಂದರೆ ಇಲ್ಲದೆ ಎಲ್ಲಾ ಸುಸೂತ್ರವಾಗಿ ನಡೆಸಿಕೊಟ್ಟ ಮೈ.ವಿ.ವಿ ಎಲ್ಲಾ ಅಧಿಕಾರಿಗಳಿಗೂ ಪ್ರತ್ಯೇಕವಾಗಿ ಅಭಿನಂದನೆಗಳನ್ನು ಸಲ್ಲಿಸಿದರು. ಮುಂದುವರೆದು ಮಾತನಾಡುತ್ತಾ, ಮೈಸೂರು ವಿಶ್ವವಿದ್ಯಾನಿಲಯದಲ್ಲಿರುವ ಮಾನಸಗಂಗೋತ್ರಿ, ಮಹಾರಾಜ ಕಾಲೇಜು ಮತ್ತು ಯುವರಾಜ ಕಾಲೇಜು ಈ ಮೂರು ಕಾಲೇಜುಗಳಿಂದ ಕನಿಷ್ಠ ೮೦೦೦ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ ಹಾಗೂ ೨೩ ವಿದ್ಯಾರ್ಥಿನಿಲಗಳಿವೆ. ಕೋವಿಡ್-೧೯ ಹಿನ್ನೆಲೆಯಲ್ಲಿ ಡ್ಯಾನಿಡ ಅತಿಥಿಗೃಹದಲ್ಲಿ 10 ಹಾಸಿಗೆಯುಳ್ಳ ಒಂದು ಕೋವಿಡ್ ಕೇಂದ್ರವನ್ನು ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಲ್ಲಿ ತುರ್ತಾಗಿ ಸ್ಥಾಪಿಸಬೇಕು. ಅವಶ್ಯಕತೆ ಇದ್ದಲ್ಲಿ ಚಿಕಿತ್ಸೆ ನೀಡಲು ಅವಕಾಶ ಕಲ್ಪಿಸಿಕೊಡಬೇಕೆಂದು ತಿಳಿಸಿದರು. ಹಾಗೆಯೇ, ವಿಶ್ವವಿದ್ಯಾನಿಲಯಕ್ಕೆ ಒಂದು ಅಂಬ್ಯುಲೆನ್ಸ್ ಅನ್ನು ಖರೀದಿಸಬೇಕೆಂದು

ತಿಳಿಸಿದರು. ಕೋವಿಡ್-19 ಹಿನ್ನೆಲೆಯಲ್ಲಿ ಬ್ಯಾಂಕ್‌ನಲ್ಲಿ ವಿದ್ಯಾರ್ಥಿಗಳು ಶುಲ್ಕ ಪಾವತಿಸಲು ಸಾಮಾಜಿಕ ಅಂತರ ಕಾಯ್ದುಕೊಳ್ಳಲು ಸಾಧ್ಯವಾಗದಿರುವುದು ಕಂಡು ಬಂದಿರುವುದರಿಂದ, ಬ್ಯಾಂಕ್‌ನಲ್ಲಿ ವಿದ್ಯಾರ್ಥಿಗಳು ಶುಲ್ಕಗಳನ್ನು ಪಾವತಿಸುವ ಬದಲು ಆನ್‌ಲೈನ್ ಮೂಲಕ ಶುಲ್ಕ ಪಾವತಿಸಲು ವ್ಯವಸ್ಥೆ ಕಲ್ಪಿಸಬೇಕೆಂದು ತಿಳಿಸಿದರು.

ಮೇಲ್ಕಂಡ ಅಂಶಗಳಿಗೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಯವರು ಮಾತನಾಡಿ, ಹೊಸ ಜಿಲ್ಲಾಧಿಕಾರಿಗೆಕೋವಿಡ್ ಪರೀಕ್ಷೆಗೆ ಒಂದು ಕೇಂದ್ರವನ್ನು ತೆರಯಲು ಪ್ರಸ್ತಾವನೆ ಸಲ್ಲಿಸಲಾಗಿದೆ.ನಿತ್ಯ 500 ಮಂದಿಗೆ ತಪಾಸಣೆ ಮಾಡಲು ವ್ಯವಸ್ಥೆಯನ್ನು ಮಾಡಲಾಗುವುದು.ಸಾಧ್ಯವಾದರೆ ಸಿಎಸ್‌ಆರ್ ನಿಧಿಯಿಂದ ಒಂದು ಅಂಬ್ಯುಲೆನ್ಸ್ ಖರೀದಿಗೆ ಕ್ರಮ ವಹಿಸಲಾಗುವುದು. ಹಾಗೆಯೇ ಈಗಾಗಲೇಶುಲ್ಕವನ್ನು ಪಾವತಿಸಲು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಆನ್‌ಲೈನ್/ಗೂಗಲ್ ಪೇ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

4) ಕುಲಸಚಿವರು ಮಾತನಾಡಿ, ಡಾ.ಎಸ್.ಶ್ರೀಕಂಠಸ್ವಾಮಿ, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ ಇವರು ಸತತವಾಗಿ ನಾಲ್ಕು ವರ್ಷಗಳಿಂದ ಯಾವುದೇ ದೂರಗಳು ಇಲ್ಲದೆ ಸುಸೂತ್ರವಾಗಿ ಕಛೇರಿ ಹಾಗೂ ಕಾಲೇಜುಗಳ ಸಂಯೋಜನಾ ಕಾರ್ಯವನ್ನು ವಿಶ್ವವಿದ್ಯಾನಿಲಯಕ್ಕೆ ಘನತೆ ಹೆಚ್ಚಿಸುವ ಕಾರ್ಯವನ್ನು ಮಾಡಿದ್ದಾರೆ. ಅವರಿಗೆ ವಿಶ್ವವಿದ್ಯಾನಿಲಯದ ಹಾಗೂ ಶಿಕ್ಷಣ ಮಂಡಳಿ ಸದಸ್ಯರುಗಳ ಪರವಾಗಿ ತುಂಬು ಹೃದಯದಿಂದ ಧನ್ಯವಾದಗಳನ್ನು ಅರ್ಪಿಸುವುದಾಗಿ ಸಭೆಯಲ್ಲಿ ತಿಳಿಸಿದರು.

ಸಹಿ/-
ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ

ಸಹಿ/-
ಕುಲಪತಿಗಳು ಹಾಗೂ ಅಧ್ಯಕ್ಷರು